**ದಿನಾಂಕ: 24-01-2012 ರಂದು ಮಧ್ಯಾಹ್ನ 12-00 ಘಂಟೆಗೆ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಶ್ರೀ ಅನಂತಕುಮಾರ ಹೆಗಡೆ ಮಾನ್ಯ ಲೋಕಸಭಾ ಸದಸ್ಯರು 12-ಉತ್ತರಕನ್ನಡ ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು, ಸಭೆಗೆ ಆಗಮಿಸಿದ ಮಾನ್ಯ ಶ್ರೀ ಅನಂತಕುಮಾರ ಹೆಗಡೆ ಸನ್ಮಾನ್ಯ ಲೋಕಸಭಾ ಸದಸ್ಯರು 12-ಉತ್ತರಕನ್ನಡ ಕ್ಷೇತ್ರ ಹಾಗೂ ಅಧ್ಯಕ್ಷರು ಜಿಲ್ಲಾ ಮಟ್ಟದ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿ ಕಾರವಾರ ರವರಿಗೆ ಸ್ವಾಗತ ಕೋರಿದರು. ಅದರಂತೆ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳನ್ನು, ಸ್ವಾಗತಿಸಿದರು. ಮತ್ತು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಸನ್ಮಾನ್ಯ ಲೋಕಸಭಾ ಸದಸ್ಯರಲ್ಲಿ ವಿನಂತಿಸಿಕೊಂಡರು.

ಮಾನ್ಯ ಲೋಕಸಭಾ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ಜಿಲ್ಲಾ ಮಟ್ಟದ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿಯ ನಾಮ ನಿರ್ದೇಶನದ ಕುರಿತು ಪ್ರಸ್ತಾಪಿಸುತ್ತ ಸಮಿತಿಗೆ ಶ್ರೀ ಕೇಶವ ಎಸ್. ನಾಯ್ಕ, ಬಳಕೂರ, ತಾಲೂಕ ಹೊನ್ನಾವರ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೀ ಅಮರ ಎನ್. ನೇರಲಕಟ್ಟೆ, ಮುಕ್ಕಾಂ ಬಚಗಾಂವ, ಚಿಪಗಿ, ತಾಲೂಕ ಸಿರ್ಸಿ ಇವರನ್ನು ಪ.ಜಾ/ಪ.ಪಂ. ವರ್ಗದ ಪ್ರತಿನಿಧಿಯಾಗಿ ಹಾಗೂ ಶ್ರೀಮತಿ ಸುಮನಾ ಡಿ. ಕುಲಕರ್ಣಿ, ಹೊಸಾ ಓಣಿ, ಮುಂಡಗೋಡ, ತಾಲೂಕ ಮುಂಡಗೋಡ ಮಹಿಳಾ ಪ್ರತಿನಿಧಿಯಾಗಿ ಇವರ ಹೆಸರುಗಳನ್ನು ಮಂಡಿಸಿ ಸಭೆಯಲ್ಲಿ ಸದ್ರಿಯವರನ್ನು ಸದಸ್ಯರನ್ನಾಗಿ ಅನುಮೋದನೆ ನೀಡಿತು. ದಿನಾಂಕ:11-02-2011ರಂದು ಜರುಗಿದ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ನಡವಳಿಗಳ ಮೇಲೆ ಸಂಬಂಧಿಸಿದ ಇಲಾಖೆಯವರು ತೆಗೆದುಕೊಂಡ ಪಾಲನಾ ವರದಿಯನ್ನು ಪರಿಶೀಲಿಸಿ, ವಿವಿಧ ಇಲಾಖೆಗಳ ಕೇಂದ್ರ ಸರಕಾರದ ಯೋಜನೆಗಳಡಿ ಇಲಾಖೆಯವರು ಸಾಧಿಸಿದ ಪ್ರಗತಿಯ ಕುರಿತು ಪರಿಶೀಲನೆ ನಡೆಸಿದರು.

**1. ತೋಟಗಾರಿಕೆ ಇಲಾಖೆ:**

ಮಾನ್ಯ ಅಧ್ಯಕ್ಷರು ತೋಟಗಾರಿಕಾ ಅಧಿಕಾರಿಗಳನ್ನು ಉದ್ದೇಶಿಸಿ, ಕರಾವಳಿ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳ ಇಳುವರಿ ಹಾಗೂ ವಿಸ್ತೀರ್ಣ ಕಡಿಮೆ ಇದ್ದ ಬಗ್ಗೆ ಸಮಂಜಸ ಮಾಹಿತಿ ನೀಡುವುದು ಹಾಗೂ ಮುಂದಿನ ದಿನಗಳಲ್ಲಿ ಕರಾವಳಿ ಪ್ರದೇಶಗಳಲ್ಲಿ Innovative concept ದಂತೆ ಯೋಜನೆ ತಯಾರಿಸಿ ಹೆಚ್ಚಿನ ಪ್ರಗತಿ ಸಾಧಿಸುವಂತೆ ಸೂಚಿಸಲಾಯಿತು.

**(ಕ್ರಮ:ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಶಿರಸಿ)**

**2. ಕೃಷಿ ಇಲಾಖೆ:**

ಮಾನ್ಯ ಅಧ್ಯಕ್ಷರು ಕೃಷಿ ಮೇಳ ಕುರಿತು ಕೃಷಿ ಅಧಿಕಾರಿಗಳಿಗೆ ವಿಚಾರಿಸಿದರು. ಸನ್ 2011-12 ನೇ ಸಾಲಿನಲ್ಲಿ ಕೃಷಿ ಮೇಳ ಕಾರ್ಯಕ್ರಮ ಇಲ್ಲದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಜೋಯಿಡಾ ತಾಲೂಕಿನಲ್ಲಿ ಸಾಂಪ್ರದಾಯಿಕ ಭತ್ತದ ಇಳುವರಿಯನ್ನು ಎಲ್ಲಾ ತಾಲೂಕುಗಳಲ್ಲಿ ವಿಸ್ತರಿಸುವ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳುವುದು. ಭತ್ತ ಹಾಗೂ ಬೆಲ್ಲದ ಬಗ್ಗೆ ಇಂಟಿಗ್ರೇಟೆಡ್ ಪ್ರೊಜೆಕ್ಟ್ ವರ್ಕ ಮಾಡುವುದು. ಜೋಯಿಡಾ ತಾಲೂಕಿನಲ್ಲಿ ರಾಸಾಯನಿಕ ಗೊಬ್ಬರ ಹಾಕದೇ ಬೆಳೆದ

101

ಭತ್ತ ಬೆಳೆಗೆ ಬ್ರಾಂಡ್ ನೇಮ ನೀಡಿ ಮಾರ್ಕೆಟಿಂಗ್ ಮಾಡುವ ಬಗ್ಗೆ ಕ್ರಮ ವಹಿಸುವುದು. Soil test map ನ್ನು ಎಲ್ಲಾ ಗ್ರಾಮ ಪಂಚಾಯತಗಳಲ್ಲಿ ಪ್ರದರ್ಶಿಸಲು ಹಾಗೂ ನವೀನತೆ ಕಲ್ಪನೆಯಿಂದ ಯೋಜನೆ ಹಮ್ಮಿಕೊಳ್ಳಲು ಸೂಚಿಸಿದರು.

**( ಕ್ರಮ:ಜಂಟಿ ಕೃಷಿ ನಿರ್ದೇಶಕರು)**

**3.ಇಂದಿರಾ ಆವಾಸ ಯೋಜನೆ:**

ಮಾನ್ಯ ಅಧ್ಯಕ್ಷರು ಇಂದಿರಾ ಅವಾಸ್ ಯೋಜನೆಯ ಪ್ರಗತಿಯ ಕುರಿತು ವಿಚಾರಿಸಿದರು. ಇಂದಿರಾ ಆವಾಸ ಯೋಜನೆಯಡಿ ಒಟ್ಟು ಗುರಿ 4366 ಇದ್ದು, 3023 ಮನೆಗಳು ಪೂರ್ಣಗೊಂಡಿವೆ ಎಂದು ಉಪಕಾರ್ಯದರ್ಶಿ(ಅಭಿವೃದ್ಧಿ) ರವರು ಸಭೆಗೆ ವಿವರಿಸಿದರು. ಈ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆಯ ಮಾರ್ಗಸೂಚಿಯಂತೆ ಉತ್ತಮ ಗುಣಮಟ್ಟದ ಮನೆಗಳನ್ನು ನಿರ್ಮಿಸುವುದು ಹಾಗೂ ತಾಲೂಕವಾರು Monitor ಮಾಡುವಂತೆ ಸೂಕ್ತ ಕ್ರಮ ವಹಿಸಿ, ಪ್ರಗತಿ ಸಾಧಿಸಲು ಉಪಕಾರ್ಯದರ್ಶಿ(ಅಭಿವೃದ್ಧಿ) ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ್ ರವರಿಗೆ ಸೂಚಿಸಲಾಯಿತು

**(ಕ್ರಮ: ಉಪಕಾರ್ಯದರ್ಶಿ(ಅಭಿವೃದ್ಧಿ )ತಾ.ಪಂ.ಕಾ.ನಿ.ಅಧಿಕಾರಿಗಳು)**

**4.ಎಸ್.ಜಿ.ಎಸ್.ವೈ:**

ಮಾನ್ಯ ಅಧ್ಯಕ್ಷರು ಎಸ್.ಜಿ.ಎಸ್.ವೈ. ಯೋಜನೆಯ ಪ್ರಗತಿಯ ಕುರಿತು SGSY ಯಡಿ ಹುಣಸೆಹಣ್ಣು, ಬೆಲ್ಲ,ತೆಂಗು,ನಾರು ಉತ್ಪನ್ನ ಬಗ್ಗೆ ಹೊಸ ಟೆಕ್ನಾಲೋಜಿಯಿಂದ ಯೋಜನಾ ವರದಿ ತಯಾರು ಮಾಡುವ ಕುರಿತು ಅದಕ್ಕೆ ಸಂಬಂದಪಟ್ಟ ಮಾಹಿತಿಗಳನ್ನು ನಿರುದ್ಯೋಗಿಗಳಿಗೆ ಸುಲಭವಾಗಿ ಅರ್ಥ ವಾಗುವಂತೆ ಯೋಜನಾ ವರದಿ ತಯಾರಿಸಿ ಗಣಕೀಕರಣ ಮಾಡಿ Website ನಲ್ಲಿ ಮಾಡಿಸುವುದು. ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ Task Force Commeittee ರಚಿಸಿ, ಜಿಲ್ಲೆಗೆ ಅನುಕೂಲವಾಗುವ ವಿವಿಧ ಕ್ಷೇತ್ರಗಳಾದ ತೋಟಗಾರಿಕೆ ಕೃಷಿ, ಹೈನುಗಾರಿಕೆ, ಅರಣ್ಯ, ಕೈಗಾರಿಕೆ, ಮೀನುಗಾರಿಕೆ ಇಲಾಖೆಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ಕೈಗೊಳ್ಳುವುದು ಹಾಗೂ ಅದರ ವರದಿಯನ್ನು ಸಿದ್ದಪಡಿಸಿ ಒಂದು ಕಾರ್ಯಾಗಾರ ಏರ್ಪಡಿಸಿ ವಿಶ್ವವಿದ್ಯಾಲಯಗಳ ಪರಿಣಿತರನ್ನು ಅಹ್ವಾನಿಸಿ ಅವರ ಸಲಹೆಗಳನ್ನು ಪಡೆದು ಕಾರವಾರ ಜಿಲ್ಲೆಯ Spot analysis ಮಾಡಿ ಜಿಲ್ಲೆಯಲ್ಲಿ ಸಿಗುವಂತಹ ಕಚ್ಚಾವಸ್ತುಗಳಿಂದ ಉತ್ಪದನಾ ವಲಯಕ್ಕೆ ಬೇಕಾಗುವ ಎಲ್ಲಾ ಸೌಲಭ್ಯಗಳೊಂದಿಗೆ ಒಂದು ವಿಶೇಷ ಯೋಜನೆಯ ಯೋಜನಾ ಕೈಪಿಡಿಯನ್ನು ತಯಾರಿಸಿ ಈ ದಿಶೆಯಲ್ಲಿ ನಿರುದ್ಯೋಗಿಗಳಿಗೆ ಮಾರ್ಗದರ್ಶನ ಆಗುವಂತೆ ತಾಲೂಕ ಮಟ್ಟದಲ್ಲಿ ಯೋಜನೆ ಬಗ್ಗೆ ತಿಳಿಸಲು ಫೆಸಿಲಿಟೇಟರ ರವರನ್ನು ನಿಯೋಜಿಸಿ, ಜಿಲ್ಲೆಯ 4-5 ತಾಲೂಕುಗಳಲ್ಲಿ SGSY ಯೋಜನೆಯ ಸಮಗ್ರ ಮಾಹಿತಿ ಲಭ್ಯವಾಗುವಂತೆ ಒಂದು ಮಾಹಿತಿ ಕೇಂದ್ರವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಿ, ಪ್ರಗತಿ ಸಾಧಿಸಲು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ.) ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ಎಸ್.ಜಿ.ಎಸ್.ವೈ. ಯೋಜನೆಯಲ್ಲಿ ಸಾಲ ಸೌಲಭ್ಯ ಪಡೆದ ಗುಂಪುಗಳು ಮೊದಲಿನ ಆದಾಯಕ್ಕಿಂತ ಹೆಚ್ಚಿನ ಆದಾಯ ಮಾಡಿಕೊಂಡಿರುವ ಬಗ್ಗೆ ಪ್ರಾಯೋಗಿಕವಾಗಿ ಕೆಲವು ಗುಂಪುಗಳ ಸಮೀಕ್ಷೆ ಮಾಡಿ ವರದಿ ಸಲ್ಲಿಸಲು ಸೂಚಿಸಿದರು. ಹಾಗೂ ಎಲ್ಲಾ ತಾಲೂಕುಗಳಲ್ಲಿ ನಗರಸಭೆ ವತಿಯಿಂದ ನಿರ್ಮಿಸಿದ ಮಾರಾಟ ಮಳಿಗೆ ಒಂದನ್ನು ಖಾದಿ ಗ್ರಾಮೋದ್ಯೋಗ ಯೋಜನೆಯಡಿ ಉತ್ಪಾದಿಸಿದ

ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಾಡಲು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲು ಸೂಚಿಸಿದರು. ದಾಂಡೇಲಿಯಲ್ಲಿ ಮಾರಾಟ ಮಳಿಗೆ ಸ್ಥಾಪಿಸಲು ತೆಗೆದುಕೊಂಡ ಕ್ರಮದ ಕುರಿತು ವಿಚಾರಿಸುತ್ತ ಕೂಡಲೇ ಸ್ಥಾಪಿಸಲು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು ಎಸ್.ಜಿ.ಎಸ್.ವೈ, ಕಾ.ನಿ.ಅ.ತಾ.ಪಂ.)**

**5. ಪಿ.ಎಮ್.ಜಿ.ಎಸ್.ವೈ:**

ಪಿ.ಎಮ್.ಜಿ.ಎಸ್.ವೈಯಡಿ ಕಾಮಗಾರಿಗಳ ಪ್ರಗತಿಯ ಕುರಿತು ಮಾನ್ಯ ಅಧ್ಯಕ್ಷರು ಎಲ್ಲಾ ರಸ್ತೆ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಿ, ಉತ್ತಮ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನೀಯರ್ ಪಿ.ಎಂ.ಜಿ.ಎಸ್.ವಾಯ್.)**

**6.ಕುಡಿಯುವ ನೀರು:**

ಮಾನ್ಯ ಅಧ್ಯಕ್ಷರು ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಯ ಪ್ರಗತಿಯ ಕುರಿತು ಉದ್ದೇಶಿಸಿ, ಕುಡಿಯುವ ನೀರು ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತ್ ವಾರು Drinking Water Quality Maping ಮಾಡಲು PRED ಕಾರವಾರ/ಸಿರ್ಸಿ ರವರಿಗೆ ಸೂಚಿಸಿದರು. ಈ ಯೋಜನೆಯ ಮಾದರಿ ಸಮೀಕ್ಷೆ ಕುರಿತು ಗ್ರಾಮ ಪಂಚಾಯತಗಳಲ್ಲಿ ಫಲಕ ಪ್ರದರ್ಶಿಸಲು ಸಂಬಂಧಪಟ್ಟ EO ಹಾಗೂ AEE ರವರು ಈ ಯೋಜನೆಯಡಿ ವರದಿ ತಯಾರಿಸಿ Public Chart ಫಾಯಿಸಿ ಮಾಡಲು ಸೂಚಿಸಿದರು.

ಕುಡಿಯುವ ನೀರು ಯೋಜನೆಯಡಿ ಕರಾವಳಿ ಪ್ರದೇಶಗಳಲ್ಲಿ ಫೆಬ್ರವರಿ ನಂತರ ಟ್ಯಾಂಕಗಳಿಂದ ನೀರು ಸರಬರಾಜು ಆಗುತ್ತಿರುವ ಹಳ್ಳಿಗಳಿಗೆ Surpace water Supply ಕುರಿತು Intergrated water supply schemeದ ನೀಲ ನಕ್ಷೆ ತಯಾರಿಸಿ ಜನವರಿ 31ರೊಳಗೆ ವರದಿಯನ್ನು ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಭಿಯಂತರರು PRED ರವರಿಗೆ ಸೂಚಿಸಲಾಯಿತು. ಹಾಗೂ ಕರಾವಳಿ ಪ್ರದೇಶದಲ್ಲಿ ಕುಡಿಯುವ ನೀರು ಯೋಜನೆಯಡಿ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣ ಗೊಳಿಸುವುದು ಹಾಗೂ ಯಾವುದೇ ಲೋಪದೋಷ ಬರದಂತೆ ಯೋಜನೆಯ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಪ್ರತಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟದ ಮಾಹಿತಿಯನ್ನು ಪಂಚಾಯತದಲ್ಲಿ Public Chart ಪ್ರದರ್ಶಿಸುವುದು. ಪಂಚಾಯತ PDO ಗಳ ಜವಾಬ್ದಾರಿಯಾಗಿದ್ದು ಈ ದಿಶೆಯಲ್ಲಿ ಕ್ರಮಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ: ಕಾ.ನಿ.ಅಭಿಯಂತರರು PRED ಕಾರವಾರ/ಶಿರಸಿ, ಎಲ್ಲಾ ತಾಲೂಕಾ ಸಹಾಯಕ ಕಾ.ನಿ.ಅಭಿಯಂತರು ಹಾಗೂ ತಾ.ಪಂ.ಕಾ.ನಿ.ಅ.)**

**7. ಸಂಪೂರ್ಣ ನೈರ್ಮಲ್ಯ ಯೋಜನೆ:**

ಮಾನ್ಯ ಅಧ್ಯಕ್ಷರು ಸಂಪೂರ್ಣ ನೈರ್ಮಲ್ಯ ಯೋಜನೆಯಡಿ, ಹಳಿಯಾಳ ಮತ್ತು ಮುಂಡಗೋಡ ತಾಲೂಕುಗಳ ಪ್ರಗತಿ ಕಡಿಮೆಯಾಗಿರುವ ಬಗ್ಗೆ ಪರಿಶೀಲಿಸಲಾಯಿತು. ಈ ಯೋಜನೆಯಡಿ ಡ್ರೈಪಿಟ್ ಶೌಚಾಲಯ ಕುರಿತು ಕರಗಪುರ IIT ಮಾದರಿಯಲ್ಲಿ ಶೌಚಾಲಯ ನಿರ್ಮಾಣದ ಕುರಿತು ಖುದ್ದಾಗಿ ಅಭ್ಯಸಿಸಿ, ಜಿಲ್ಲೆಯಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವುದು. ಹಾಗೂ ಮುಂದಿನ ಸಭೆಯಲ್ಲಿ ಈ ಬಗ್ಗೆ ಜಿಲ್ಲೆಯ

ಒಂದು ಗ್ರಾಮ ಪಂಚಾಯತದಲ್ಲಿ ಪ್ರಯೋಗಿಸಿ ವರದಿ ನೀಡುವುದು. ಈ ಯೋಜನೆಗೆ ಸಂಬಂಧಿಸಿದಂತೆ ಇಲಾಖಾ ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಚಿಸಿದರು.

**(ಕ್ರಮ:ಉಪಕಾರ್ಯದರ್ಶಿ ಜಿ.ಪಂ.)**

**8. ಜಲಾನಯನ ಇಲಾಖೆ:**

ಮಾನ್ಯ ಅಧ್ಯಕ್ಷರು ಜಿಲ್ಲೆಯಲ್ಲಿ ಕೈಗೊಂಡ ಜಲಾನಯನ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿ, ಜಲಾನಯನ ಇಲಾಖೆಯ ಕಾಮಗಾರಿಯ ಬಗ್ಗೆ ತಾಲೂಕ ಪಂಚಾಯತ್ ಅಧ್ಯಕ್ಷರ ನೇತೃತ್ವದಲ್ಲಿ Monitor ಮಾಡಿ ವರದಿ ಪಡೆದು ನೀಡಲು ಸೂಚಿಸಿದರು. ಹಾಗೂ ಜಲಾನಯನ ಇಲಾಖೆಯ ಕಾಮಗಾರಿಗಳ 2 ವರ್ಷದಲ್ಲಿ ಕಾಮಗಾರಿ ನಡೆಸಿದ ಕುರಿತು ಪ್ರದೇಶಗಳ ವಿವರ ನೀಡಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು)**

**9.ಡಿ.ಆರ್.ಡಿ.ಎ.**

ಮಾನ್ಯ ಅಧ್ಯಕ್ಷರು ಡಿ.ಆರ್.ಡಿ.ಎ ಅಧಿಕಾರಿಗಳನ್ನು ಉದ್ದೇಶಿಸಿ, ಡಿ.ಆರ್.ಡಿ.ಎ ಯೋಜನೆ ಅಡಿಯಲ್ಲಿ ಖಾಲಿ ಹುದ್ದೆಗಳಿಗೆ ಪ್ರಸ್ತಾವ ಸಲ್ಲಿಸಲು ಸೂಚಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು)**

**10.ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ:**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ತಾಲೂಕುಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಪ್ರಗತಿ ಸಾಧಿಸಿರುವುದಾಗಿ ಉಪಕಾರ್ಯದರ್ಶಿ (ಅಭಿವೃದ್ಧಿ) ರವರು ಸಭೆಗೆ ವಿವರಿಸಿದರು. ಈ ಯೋಜನೆಯಡಿ ಪ್ರಗತಿ ಕಡಿಮೆ ಇದ್ದು ಈ ದಿಶೆಯಲ್ಲಿ ಕೈಗೊಳ್ಳುವ ಯೋಜನೆಯನ್ನು ರೂಪಿಸಲು ಸೂಚನೆ ನೀಡಿ, ಮಾರ್ಗಸೂಚಿಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಗುಣಮಟ್ಟದ ಕಾಮಗಾರಿಯೊಂದಿಗೆ ಶೇಕಡಾ 100% ರಷ್ಟು ಪ್ರಗತಿ ಸಾಧಿಸಲು ಸೂಕ್ತ ಕ್ರಮ ವಹಿಸಲು ಸಂಬಂಧಿಸಿದ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಯಿತು. ರಾಜೀವಗಾಂಧಿ ಸೇವಾ ಕೇಂದ್ರ ಕಟ್ಟಡದ ನಿರ್ಮಾಣಕ್ಕೆ ಸರಕಾರದ ನಿಯಮಾವಳಿಯಂತೆ ಶೇಕಡಾ 40 ರಷ್ಟು ಸಾಮಗ್ರಿ ವೆಚ್ಚವು ಸಾಕಾಗದೇ ಇರುವುದರಿಂದ ಕಾಮಗಾರಿ ನಡೆಸುವುದು ಕಷ್ಟ ಸಾಧ್ಯವಾಗಿದ್ದು ಸಡಿಲಿಕೆ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

**(ಕ್ರಮ:ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಂಬಂಧಿಸಿದ ಇಲಾಖಾ ಅನುಷ್ಠಾನಾಧಿಕಾರಿಗಳು)**

ಮುಖ್ಯಯೋಜನಾಧಿಕಾರಿ ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮಾನ್ಯ ಲೋಕಸಭಾ ಸದಸ್ಯರು,
ಹಾಗೂ ಅಧ್ಯಕ್ಷರು ಜಿಲ್ಲಾ ಮಟ್ಟದ ಜಾಗೃತ
ಮತ್ತು ಮೇಲ್ವಿಚಾರಣಾ ಸಮಿತಿ, ಉತ್ತರ ಕನ್ನಡ.